ಭಾನುವಾರ,5 ನವೆಂಬರ್ 2017 | ಪುಟಗಳು: 16+4+6 | ಬೆಲೆ: ₹ 5.00
www.vijaykarnataka.com
ಸಂಪುಟ: 17 | ಸಂಚಿಕೆ: 99
VK
ವಿಜಯ ಕರ್ನಾಟಕ
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ |



ರಣಜಿ: ಕರ್ನಾಟಕಕ್ಕೆ ಮಹಾರಾಷ್ಟ್ರ ವಿರುದ್ಧ ಇನಿಂಗ್ಸ್, 136 ರನ್ ಜಯ, ಮಿಥುನ್‌ಗೆ 5 ವಿಕೆಟ್ P14

2022ಕ್ಕೆ ಭ್ರಷ್ಟಾಚಾರ, ಬಡತನ, ಭಯೋತ್ಪಾದನೆ ಮುಕ್ತ ನವಭಾರತ: ನೀತಿ ಆಯೋಗದ ವಿಷನ್ ಡಾಕ್ಯುಮೆಂಟ್ P12

ಕ್ಯಾಬಿನ್ ಬ್ಯಾಗ್ ವಿಚಾರದಲ್ಲಿ ಅನುಚಿತ ವರ್ತ…
ಇಂಡಿಗೊ ಸಿಬ್ಬಂದಿ ವಿರುದ್ಧ ಸಿಂಧೂ ಆಕ್ರೋಶ…

# ಮನೆ ಕಾಲಿಂಗ್ ಬೆಲ್‌ನಲ್ಲಿ ಇನ್ನು ಸ್ವಚ್ಛತೆಯ ಗಾನ !

## ರಾಜ್ಯದಲ್ಲಿ ವಿನೂತನ ಪ್ರಯತ್ನಕ್ಕೊಂದು ಮುನ್ನುಡಿ | ಬಂಟ್ವಾಳದ ಕಳ್ಳಿಗೆ ಗ್ರಾಮ ಪೈಲೆಟ್ ಯೋಜನೆಗೆ ಸಿದ್ಧತೆ

■ **ಸ್ಟೀವನ್ ರೇಗೊ,** ಮಂಗಳೂರು



ಡಾ.ಎಂ.ಆರ್.ರವಿ



ಮನೆಯಲ್ಲಿರುವ ಕಾಲಿಂಗ್‌ಬೆಲ್‌ನಲ್ಲಿ ಹಾಡುಗಳು ಮೊಳಗುವುದು ಸರ್ವೇಸಾಮಾನ್ಯ. ಆದರೆ ಇನ್ನೂ ಮುಂದೆ ಕರಾವಳಿಯ ಮನೆ ಮನೆಗಳಲ್ಲಿರುವ ಕಾಲಿಂಗ್‌ಬೆಲ್‌ನಲ್ಲಿ ಸ್ವಚ್ಛತೆಯ ಕುರಿತು ಸಂದೇಶ ಸಾರುವ ಹಾಡುಗಳು ಕೇಳಲಿದೆ.

ಇದು ಕಾಲಿಂಗ್‌ಬೆಲ್ ಮೂಲಕ ಸ್ವಚ್ಛತೆಯ ಪಾಠ ಹೇಳುವ ಹೊಸ ಪರಿಕಲ್ಪನೆ.

ಕರಾವಳಿಯಲ್ಲಿ ಈಗಾಗಲೇ ಸ್ವಚ್ಛತೆಯ ಕುರಿತು ಸಾಕಷ್ಟು ಜಾಗೃತಿ ಕಾರ್ಯಕ್ರಮಗಳು ನಡೆದಿದೆ. ಜನರು ಕೂಡ ಸ್ವಚ್ಛತೆಯ ಅನಿವಾರ್ಯತೆಯನ್ನು ಕೂಡ ಕಲಿತುಕೊಂಡಿದ್ದಾರೆ. ಇದೇ ವಿಚಾರದಲ್ಲಿ ಸರಕಾರ ಕೂಡ ದ.ಕ.ಜಿ.ಪಂ.ಗೆ ಪ್ರಶಸ್ತಿಯ ಗರಿಯನ್ನು ನೀಡಿ ಗೌರವಿಸಿದೆ. ದ.ಕ.ಜಿ.ಪಂ.ನ ಸಿಇಒ ಡಾ.ಎಂ.ಆರ್.ರವಿ ಅವರು ಈ ಸ್ವಚ್ಛತೆಗಾಗಿ ವಿಶೇಷ ಗೀತೆಯನ್ನು ರಚನೆ ಮಾಡಿದ್ದು, ಅದು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿ ಹರಡಿದ್ದು ಎಲ್ಲವೂ ವಿಶೇಷ. ಈಗ ಕರಾವಳಿಯ ಪ್ರತಿ ಮನೆಯಲ್ಲೂ ಈ ಹಾಡನ್ನು ಕಾಲಿಂಗ್‌ಬೆಲ್ ಮೂಲಕ ಕೇಳಿಸುವ ಪ್ರಯತ್ನವೊಂದು ಭರ್ಜರಿಯಾಗಿ ನಡೆದಿದೆ.

**ಕಾಲಿಂಗ್‌ಬೆಲ್‌ಗೆ ನೆರವು ಕೊಟ್ಟರು:** ಈಗಾಗಲೇ ಸಿದ್ಧಪಡಿಸಿದ ಕಾಲಿಂಗ್‌ಬೆಲ್‌ಗೆ ತಲಾ 450 ರೂ.ಖರ್ಚು ಬೀಳುತ್ತದೆ. 9ಕ್ಕೆ ಈಗಾಗಲೇ ಸಹ್ಯಾದ್ರಿ ಕಾಲೇಜಿನವರು ಪ್ರಾಯೋಜಕತ್ವವನ್ನು ವಹಿಸಿಕೊಂಡಿದ್ದಾರೆ. ಬಂಟ್ವಾಳದ ಪೈಲೆಟ್ ಯೋಜನೆಗೆ ರಾಮಕೃಷ್ಣ ಮಠ ಹಾಗೂ ಸಹ್ಯಾದ್ರಿ ಕಾಲೇಜಿನವರು ಪ್ರಾಯೋಜಕತ್ವ ವಹಿಸುವ ಕುರಿತು ಮಾತುಕತೆಯಾಗಿದೆ. ನನ್ನ ಸ್ವಚ್ಛತಾ ಗೀತೆಯನ್ನು ನಾಲ್ಕು ಹಂತಗಳಲ್ಲಿ ಕಾಲಿಂಗ್‌ಬೆಲ್‌ನಲ್ಲಿ ಮೂಡಿಸಲಾಗಿದೆ. ಮೊದಲ ಕಾಲಿಂಗ್‌ಬೆಲ್‌ನಲ್ಲಿ 24 ಸೆಕೆಂಡ್, ನಂತರ 28 ಸೆಕೆಂಡ್, 32 ಸೆಕೆಂಡ್ ಹಾಗೂ 45 ಸೆಕೆಂಡ್‌ಗಳಲ್ಲಿ ಈ ಗೀತೆ ಮೂಡಿ ಬಂದಿದೆ. ಎಲ್ಲಿಯೂ ಮೂಲ ಗೀತೆಗೆ ಧಕ್ಕೆಯಾಗದಂತೆ ಮೂಡಿಸಲಾಗಿದೆ. ಒಟ್ಟು ಹಾಡುಗಳನ್ನು ಕೇಳಬೇಕಾದರೆ 4 ಕಾಲಿಂಗ್‌ಬೆಲ್ ಅಗತ್ಯವಿದೆ ಎನ್ನುತ್ತಾರೆ ಡಾ.ಎಂ.ಆರ್.ರವಿ. ಒಟ್ಟಾರೆಯಾಗಿ ಹೊಸ ಮಾದರಿಯ ಪ್ರಯತ್ನದಿಂದ ಕರಾವಳಿಯಲ್ಲಿ ಮತ್ತಷ್ಟು ಸ್ವಚ್ಛತೆಯ ಅರಿವು ಮೂಡುವ ಸಾಧ್ಯತೆಯಂತೂ ಇದೆ.

### ಹಾಡಿಗೆ ಕಾಲಿಂಗ್ ಬೆಲ್ ಟಚ್

ದ.ಕ.ಜಿ.ಪಂ.ನ ಸಿಇಒ ಡಾ.ಎಂ.ಆರ್.ರವಿ ಅವರು ಹೇಳುವಂತೆ ಕರಾವಳಿಯ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿಗೆ ಕಾರ್ಯಕ್ರಮವೊಂದಕ್ಕೆ ಹೋಗಿದ್ದೆ. ಅಲ್ಲಿ ಕಾಲೇಜಿನ ಮುಖ್ಯಸ್ಥರಲ್ಲಿ ಸ್ವಚ್ಛತೆಯ ಕುರಿತು ಮಾತನಾಡುತ್ತಾ ಇದ್ದಾಗ ಕಾಲಿಂಗ್‌ಬೆಲ್‌ನಲ್ಲಿ ಸ್ವಚ್ಛತೆಯ ಅರಿವು ಮೂಡಿಸುವ ಕುರಿತು ಯೋಜನೆ ಹೇಳಿದ್ದೆ. ಅಲ್ಲಿಯ ಉಪನ್ಯಾಸಕರು ತಕ್ಷಣವೇ ಅದಕ್ಕೆ ಪೂರಕವಾಗಿ ಸ್ಪಂದನೆ ತೋರಿಸಿದರು. ಮುಂದೆ ಅವರೇ ಕಾಲಿಂಗ್‌ಬೆಲ್ ರಚನೆ ಮಾಡಿ ನೀಡಿದರು. ಈಗಾಗಲೇ ದ.ಕ.ಜಿ.ಪಂ.ನಲ್ಲಿರುವ ಕಚೇರಿಗೆ 9 ಕಾಲಿಂಗ್ ಬೆಲ್‌ಗಳನ್ನು ಅಳವಡಿಸಿಕೊಳ್ಳಲಾಗಿದೆ. ಬಂಟ್ವಾಳದ ಕಳ್ಳಿಗೆ ಗ್ರಾಮ ಪಂಚಾಯಿತಿಯನ್ನು ಈ ಯೋಜನೆಗೆ ಪೈಲೆಟ್ ರೂಪದಲ್ಲಿ ತೆಗೆದುಕೊಳ್ಳಲಾಗಿದೆ. ಅಲ್ಲಿ 1127 ಮನೆಗಳು ಇವೆ. ಅದರಲ್ಲಿ 1123 ಮನೆಗಳಿಗೆ ವಿದ್ಯುತ್ ಸಂಪರ್ಕವಿದೆ. 400 ಮನೆಗಳಿಗೆ ಕಾಲಿಂಗ್‌ಬೆಲ್ ಇದೆ. ಈ ಗ್ರಾಮದ ಎಲ್ಲ ಮನೆಯಲ್ಲೂ ಈ ಸ್ವಚ್ಛತೆಯ ಕಾಲಿಂಗ್‌ಬೆಲ್ ಶೀಘ್ರದಲ್ಲಿ ಜೋಡಿಸಲಾಗುತ್ತದೆ. ಅಲ್ಲಿಯ ಪ್ರತಿಕ್ರಿಯೆಗಳನ್ನು ನೋಡಿಕೊಂಡು ಕರಾವಳಿಯ ಉಳಿದ ಗ್ರಾಮ ಪಂಚಾಯಿತಿಗಳಲ್ಲಿ ನೋಡಲಾಗುತ್ತದೆ. ಇದರ ವರದಿಯನ್ನು ಸರಕಾರಕ್ಕೂ ಕಳುಹಿಸಲಾಗುತ್ತದೆ ಎನ್ನುವುದು ಅವರ ಮಾತು.